ಓ ಎಸ್ ನಂಃ 92/2015 ಪಿ.ಡಬ್ಲ್ಯೂ- 01

<u>ಸಾಕ್ಷಿಯನ್ನು ದಿನಾಂಕ **03-02-2026** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

**<u>ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎ ಕೆ ಪಿ ವಕೀಲರಿಂದಃ</u>**

ಈ ದಾವೆಯನ್ನು ನಮ್ಮ ತಾಯಿ ಪಂಪಾಪತಿ, ಬಸಲಿಂಗಪ್ಪ, ವಿರುಪಾಕ್ಷಪ್ಪ, ಚನ್ನಬಸಪ್ಪ ಇವರ ಮೇಲೆ ಹಾಕಿದ್ದಾರೆ. ಈ ದಾವೆ ಮಾಡಲು ಮಾಹಿತಿಯನ್ನು ನಮ್ಮ ತಾಯಿ ಕೊಟ್ಟಿದ್ದಾರೆ. ಈ ದಾವೆಯ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈಗ ನನಗೆ 43 ವರ್ಷ ಆಗಿರುತ್ತವೆ. ನಮ್ಮ ತಾಯಿಗೆ 60 ವರ್ಷ ಇರಬಹುದು. ಈ ದಾವಾ ಪತ್ರದಲ್ಲಿ ನಮ್ಮ ತಾಯಿಯ ವಯಸ್ಸು ಎಷ್ಟು ಎಂದು ನಮೂದು ಮಾಡಿದ್ದಾರೆ ಎನ್ನುವುದು ನನಗೆ ಮಾಹಿತಿ ಇಲ್ಲ. ನಮ್ಮ ತಾಯಿಯ ಕಾಲು ಫ್ರ್ಯಾಕ್ಚರ್ 12 ವರ್ಷದ ಹಿಂದೆ ಆಗಿರುತ್ತದೆ. ನಮ್ಮ ತಾಯಿಗೆ ಈಗ ಜಾಸ್ತಿ ಹೊತ್ತು ನಿಲ್ಲಲು ಆಗುವುದಿಲ್ಲ. ನಾನು 3ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ. ದಾವಾ ಪತ್ರದಲ್ಲಿ ಬರೆದ ವಿಷಯವನ್ನು ನಮ್ಮ ವಕೀಲರು ನನಗೆ ಓದಿ ಹೇಳಿದ್ದಾರೆ. ಈ ದಾವೆಯನ್ನು ಭೂಮಿಯಲ್ಲಿ ಭಾಗ ಬೇಕು ಎಂದು ನಮ್ಮ ತಾಯಿ ಹಾಕಿದ್ದಾಳೆ, ಇದನ್ನು ಹೊರತುಪಡಿಸಿ ಬೇರೆ ಯಾವುದಕ್ಕೂ ದಾವೆ ಹೂಡಿಲ್ಲ.

**<u>ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.